ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: **DTE-ADMN0 EST(14)/01/2022-JD**

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ: 02-12-2022

**ಸುತ್ತೋಲೆ**

ಮಾನ್ಯರೆ,

ವಿಷಯ: ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ವಿವಿಧ ವಿಭಾಗಗಳಲ್ಲಿ ಖಾಲಿಯಿರುವ ಎಸ್.ಸಿ / ಎಸ್.ಟಿ ಬ್ಯಾಕ್‌ಲಾಗ್ ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧದ ಸಭೆಗೆ ಹಾಜರಾಗುವ ಕುರಿತು.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂ: ಇಡಿ 196 ಯುಪಿಸಿ 2000 (ಭಾಗ), ದಿ: 22.01.2003.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ/02/ಬಿಇಎಂ/2021 ದಿನಾಂಕ:04-07-2022.
3. ಈ ಕಛೇರಿಯ ಸುತ್ತೋಲೆ ಪತ್ರ ಸಂ.: ಡಿಟಿಇ ಎಡಿಎಂಒ ಇಎಸ್‌ಟಿ14 110-2021, ದಿನಾಂಕ: 25.06.2022

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2)ರ ಪತ್ರದಲ್ಲಿ ಸರ್ಕಾರವು ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದು, ಅದರಂತೆ ಉಲ್ಲೇಖ (3)ರಲ್ಲಿ ಅನುದಾನಿತ ಸಂಸ್ಥೆಗಳಿಂದ ಬ್ಯಾಕ್‌ಲಾಗ್ ಹುದ್ದೆಗಳ ಮಾಹಿತಿ ಸಲ್ಲಿಸಲು ಸೂಚಿಸಲಾಗಿತ್ತು. ಆದರೂ ಸಹ ಹಲವಾರು ಸಂಸ್ಥೆಗಳು ಮಾಹಿತಿಯನ್ನು ನೀಡದೇ ಇರುವುದರಿಂದ, ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ವಿವಿಧ ವಿಭಾಗಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ **ದಿನಾಂಕ: 03-12-2022 ರಂದು ಪೂರ್ವಾಹ್ನ 11.00 ಕ್ಕೆ ಸಭೆಯನ್ನು TEQIP ಹಾಲ್, ಮೊದಲನೆ ಮಹಡಿ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.**

ಬ್ಯಾಕ್‌ಲಾಗ್ ಉಪನ್ಯಾಸಕರ ಹುದ್ದೆಗಳ ನೇಮಕಾತಿಯ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಸದರಿ ಸಭೆಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು / ಆಡಳಿತ ಮಂಡಳಿಯ ಅಧ್ಯಕ್ಷರು/ ಸದಸ್ಯರು ಸಂಬಂಧಪಟ್ಟ ಮಾಹಿತಿಯ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಖಾಲಿಯಿರುವ ಉಪನ್ಯಾಸಕರ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ವಿಳಂಬಕ್ಕೆ ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

**ಜಂಟಿ ನಿರ್ದೇಶಕರು (ಆಡಳಿತ)**
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1. ಪ್ರಾಂಶುಪಾಲರು / ಆಡಳಿತ ಮಂಡಳಿಯ ಅಧ್ಯಕ್ಷರು / ಸದಸ್ಯರು, ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳು. (ಅನುಬಂಧದಲ್ಲಿ ತಿಳಿಸಿರುವಂತೆ)
2. ಇ-ಗವರ್ನೆನ್ಸ್ ವಿಭಾಗಕ್ಕೆ- ವೆಬ್ ಸೈಟ್‌ನಲ್ಲಿ ಪ್ರಚುರ ಪಡಿಸಲು.

# ಅನುಬಂಧ

ಎಸ್.ಸಿ / ಎಸ್.ಟಿ ಬ್ಯಾಕ್‌ಲಾಗ್ ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು **ಪ್ರಸ್ತಾವನೆ ಸಲ್ಲಿಸದಿರುವ** ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ವಿವರ

| ಕ್ರ.ಸಂ | ಕೋಡ್ | ಹೆಸರು ಮತ್ತು ವಿಳಾಸ | ಜಿಲ್ಲೆ |
|---|---|---|---|
| 1. | 203 | ಆಚಾರ್ಯ ಪಾಠಶಾಲ ಪಾಲಿಟೆಕ್ನಿಕ್, ಸೋಮನಹಳ್ಳಿ , ಬೆಂಗಳೂರು | ಬೆಂಗಳೂರು-ನಗರ |
| 2. | 207 | ಎಮ್ ಇ ಐ (ಸಂಜೆ) ಪಾಲಿಟೆಕ್ನಿಕ್ , ರಾಜಾಜಿನಗರ , ಬೆಂಗಳೂರು | ಬೆಂಗಳೂರು-ನಗರ |
| 3. | 330 | ಇಂಪಾಕ್ಟ್ ಪಾಲಿಟೆಕ್ನಿಕ್ ,ಕೊಡಿಗೆಹಳ್ಳಿ, ಬೆಂಗಳೂರು | ಬೆಂಗಳೂರು-ನಗರ |
| 4. | 364 | ಶ್ರೀ ವೆಂಕಟೇಶ್ವರ ಪಾಲಿಟೆಕ್ನಿಕ್ ,ಬನ್ನೇರುಘಟ್ಟ , ಬೆಂಗಳೂರು | ಬೆಂಗಳೂರು-ನಗರ |
| 5. | 433 | ಪಿ ವಿ ಪಿ ಪಾಲಿಟೆಕ್ನಿಕ್ , ಜ್ಞಾನ ಭಾರತಿ ಹತ್ತಿರ , ಮಲ್ಲತ್ತಹಳ್ಳಿ , ಬೆಂಗಳೂರು | ಬೆಂಗಳೂರು-ನಗರ |
| 6. | 363 | ಎಸ್. ಇ. ಎಸ್ ಪಾಲಿಟೆಕ್ನಿಕ್ , ಸಿರಗುಪ್ಪ | ಬಳ್ಳಾರಿ |
| 7. | 310 | ಜವಹರಲಾಲ್ ನೆಹರು ಪಾಲಿಟೆಕ್ನಿಕ್, ಠಾಣಕುಶನೂರು | ಬೀದರ್ |
| 8. | 332 | ಕೆ .ವಿ.ಟಿ ಪಾಲಿಟೆಕ್ನಿಕ್ , ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 9. | 353 | ಎಸ್ .ಜೆ .ಎಮ್ ಪಾಲಿಟೆಕ್ನಿಕ್ , ಬೀರೂರ್ | ಚಿಕ್ಕಮಗಳೂರು |
| 10. | 337 | ಎಸ್ ಎನ್. ಮೂಡಬಿದ್ರೆ ಪಾಲಿಟೆಕ್ನಿಕ್ , ಮೂಡಬಿದ್ರಿ | ದಕ್ಷಿಣ ಕನ್ನಡ |
| 11. | 340 | ಎಸ್‌ಎನ್‌ಎಸ್ ಪಾಲಿಟೆಕ್ನಿಕ್ ಸುಂಕದ ಕಟ್ಟೆ,ಬಜ್ಪೆ,ಮಂಗಳೂರು (ತಾ) | ದಕ್ಷಿಣ ಕನ್ನಡ |
| 12. | 302 | ಶ್ರೀ ತರಳಬಾಳು ಜಗದ್ಗುರು ಪಾಲಿಟೆಕ್ನಿಕ್ ,ಹರಪನಹಳ್ಳಿ, ,ದಾವಣಗೆರೆ | ದಾವಣಗೆರೆ |
| 13. | 323 | ನೂತನ್ ವಿದ್ಯಾಲಯ ಸೊಸೈಟಿ ಪಾಲಿಟೆಕ್ನಿಕ್ ,ಕಲಬುರುಗಿ | ಕಲಬುರುಗಿ |
| 14. | 210 | ಜೆಎಸ್‌ಎಸ್ ಪಿಡಿಎ ,ಮೈಸೂರು | ಮೈಸೂರು |
| 15. | 208 | ಜೆ .ಎಸ್ .ಎಸ್ ಮಹಿಳಾ ಪಾಲಿಟೆಕ್ನಿಕ್ , ಮೈಸೂರು | ಮೈಸೂರು |
| 16. | 324 | ಜೆ. ಎಸ್. ಎಸ್ ಪಾಲಿಟೆಕ್ನಿಕ್ , ನಂಜನಗೂಡು | ಮೈಸೂರು |
| 17. | 346 | ಡಿ ವಿ ಎಸ್ ಪಾಲಿಟೆಕ್ನಿಕ್ , ಶಿವಮೊಗ್ಗ | ಶಿವಮೊಗ್ಗ |
| 18. | 371 | ಸಹ್ಯಾದ್ರಿ ಪಾಲಿಟೆಕ್ನಿಕ್ ,ತೀರ್ಥಹಳ್ಳಿ | ಶಿವಮೊಗ್ಗ |
| 19. | 370 | ಶ್ರೀ ವಿದ್ಯಾಧಿರಾಜ್ ಪಾಲಿಟೆಕ್ನಿಕ್ ,ಕುಮಟ | ಉತ್ತರ ಕನ್ನಡ |

**ಜಂಟಿ ನಿರ್ದೇಶಕರು (ಆಡಳಿತ)**
ತಾಂತ್ರಿಕ ಶಿಕ್ಷಣ ಇಲಾಖೆ